**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.**

**OS No**.351/2016

**PW**:1

**ದಿನಾಂಕ 04.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಸ್.ಎಸ್.ಆರ್. ವಕೀಲರಿಂದ:**

ಮೃತ 1 ನೇ ವಾದಿ ನನ್ನ ತಂದೆ. ನನ್ನ ತಂದೆಗೆ ಸೇರಿದ ಜಮೀನಿನ ಸರ್ವೆ ನಂ.221/4, ವಿಸ್ತೀರ್ಣ 3 ಎಕರೆ 07 ಗುಂಟೆ ಇರುತ್ತದೆ. ನಮ್ಮ ತಂದೆ 1 ನೇ ವಾದಿಗೆ 2 ಎಕರೆ 20 ಗುಂಟೆ ಮಾತ್ರ ಬಂದಿರುತ್ತದೆ ಎಂದರೆ ಸರಿಯಲ್ಲ. ನನಗೆ ಸರ್ವೆ ನಂ.221/3, ವಿಸ್ತೀರ್ಣ 2 ಎಕರೆ 20 ಗುಂಟೆ ಬಂದಿರುತ್ತದೆ. 1 ನೇ ಪ್ರತಿವಾದಿಯ ಆಸ್ತಿಯ ಸರ್ವೆ ನಂ.222, ವಿಸ್ತೀರ್ಣ 9 ಎಕರೆ 17 ಗುಂಟೆ ಇರುತ್ತದೆ. ನಮ್ಮ ಜಮೀನಿನ ಪಶ್ಚೀಮ ದಿಕ್ಕಿಗೆ ಪ್ರತಿವಾದಿಯ ಜಮೀನು ಇರುತ್ತದೆ ಎಂದರೆ ಸರಿ. ನಮ್ಮ ಜಮೀನು ಪ್ರತಿವಾದಿಯ ಜಮೀನಿನ ಪೂರ್ವ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಚೋರಗಿಯಿಂದ ಬಬಲಾದಿ ಮುಖ್ಯ ರಸ್ತೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಜಮೀನಿನ ಪಶ್ಚೀಮ ದಿಕ್ಕಿಗೆ ಬಬಲಾದಿಯ ಮುಖ್ಯ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಪಶ್ಚಿಮ ದಿಕ್ಕಿನಲ್ಲಿರುವ ರಸ್ತೆಯಲ್ಲಿಯೇ ಪ್ರತಿವಾದಿಯು ತಮ್ಮ ಜಮೀನಿಗೆ ಹೋಗಿ ಬಂದು ಮಾಡುತ್ತಾನೆ ಎಂದರೆ ಸರಿ. ಸಾಕ್ಷಿಯು ನಾವು ಸಹ ಅಲ್ಲಿ ಹೋಗಿ ಬಂದು ಮಾಡುತ್ತೇವೆ ಎಂದು ನುಡಿಯುತ್ತಾರೆ. ನಾವು ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಇರುವ ಚೋರಗಿ--ಬಬಲಾದ ರಸ್ತೆಯಲ್ಲಿಯೂ ಸಹ ನಮ್ಮ ಜಮೀನಿಗೆ ಹೋಗಿ ಬಂದು ಮಾಡುತ್ತೇನೆ ಎಂದರೆ ಸರಿ.

ನಾನು ಮತ್ತು ನಮ್ಮ ತಂದೆಯವರು ಹಾಗೂ ನಮ್ಮ ಕುಟುಂಬದವರು ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಇರುವ ಚೋರಗಿ-ಬಬಲಾದ ರಸ್ತೆಯ ಮುಖಾಂತರ ನಮ್ಮ ಜಮೀನಿಗೆ ಹೋಗುತ್ತೇವೆ ಎಂದರೆ ಸರಿ. ಪ್ರತಿವಾದಿಯ ಜಮೀನಿನ ಪಶ್ಚೀಮ ದಿಕ್ಕಿಗೆ ಇರುವ ದಾರಿಯನ್ನು ಈಗ ಬಂದ್ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಶ್ಚಿಮ ದಿಕ್ಕಿನ ದಾರಿಯನ್ನು ಬಂದ್ ಮಾಡಿರುವ ಕಾರಣ ನೀವು ನಿಮ್ಮ ಜಮೀನಿನ ಪೂರ್ವ ದಿಕ್ಕಿಗೆ ಇರುವ ಚೋರಗಿ-ಬಬಲಾದ ರಸ್ತೆಯ ಮುಖಾಂತರ ನಿಮ್ಮ ಜಮೀನಿಗೆ ಹೋಗುತ್ತಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇನ್ನೊಬ್ಬರ ಜಮೀನಿನ ಮುಖಾಂತರ ನಮ್ಮ ಜಮೀನಿಗೆ ಹೋಗುತ್ತಿದ್ದೇವೆ ಎಂದು

-2-

ನುಡಿಯುತ್ತಾರೆ. ಸದರಿ ಇನ್ನೊಬ್ಬರ ಜಮೀನಿನ ಮಾಲೀಕರ ಹೆಸರು ವಿಠ್ಠಲ ಬಿರಾದಾರ ಇರುತ್ತದೆ. ಸದರಿಯವರ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸದರಿ ನಮ್ಮ ಜಮೀನಿನ ಪೂರ್ವ ದಿಕ್ಕಿಗೆ

ಇರುವ ಚೋರಗಿ-ಬಬಲಾದ ರಸ್ತೆಯನ್ನು ಬಿಟ್ಟು ನಾವು ಇನ್ನೊಬ್ಬರ ಜಮೀನಿನಲ್ಲಿ ನಮ್ಮ ಜಮೀನಿಗೆ ಹೋಗುತ್ತಿದ್ದೇವೆ ಎಂದರೆ ಸರಿ.

ಪ್ರತಿವಾದಿಯ ಜಮೀನಿನಲ್ಲಿ 3 ಪಟ್ಟ ಆಗಿರುತ್ತವೆ. ನಮ್ಮ ಜಮೀನಿನ ಸರ್ವೆ ನಂಬರ 221 ರಲ್ಲಿ 4 ಪಟ್ಟ ಆಗಿದ್ದು ಅದರಲ್ಲಿ ಸಿದ್ದಯ್ಯ ಈರತಯ್ಯ ಹಿರೇಮಠ ಇವರಿಗೆ ಸರ್ವೆ ನಂ.221/1 ಮತ್ತು 221/2 ತಲಾ 20 ಗುಂಟೆ ಆಸ್ತಿ ಬಂದಿರುತ್ತದೆ. ಸರ್ವೆ ನಂ.221/3 ನನಗೆ ಬಂದಿರುತ್ತದೆ. ಸದರಿ ಆಸ್ತಿಯನ್ನು ನಾನು ಲಕ್ಷ್ಮೀಬಾಯಿ ನಂದ್ಯಾಳ ಇವರಿಗೆ ಅಡಮಾನ ಮಾಡಿರುತ್ತೇನೆ. ಈಗ ಉತಾರ ಲಕ್ಷ್ಮೀಬಾಯಿ ನಂದ್ಯಾಳ ಇವರ ಹೆಸರಿನಲ್ಲಿ ಬರುತ್ತದೆ. ಸರ್ವೆ ನಂ.221/4 ಇದು ಮೃತ 1 ನೇ ವಾದಿಗೆ ಬಂದಿದ್ದು ಅವರು ಮರಣಾ ನಂತರ ವಾರಸಾ ನಾತೆಯಿಂದ ನನಗೆ ಹಾಗೂ ಇತರೇ ವಾದಿಗಳಿಗೆ ಬಂದಿರುತ್ತದೆ. ನಾನು ಲಕ್ಷ್ಮೀಬಾಯಿ ನಂದ್ಯಾಳ ಮತ್ತು ಸಿದ್ದಯ್ಯ ಹಿರೇಮಠ ಇವರಿಗೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸದರಿ ಲಕ್ಷ್ಮೀಬಾಯಿ ನಂದ್ಯಾಳ ಮತ್ತು ಸಿದ್ದಯ್ಯ ಹಿರೇಮಠ ಇವರು ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಇರುವ ಚೋರಗಿ-ಬಬಲಾದ ರಸ್ತೆಯ ಮುಖಾಂತರ ತಮ್ಮ ಜಮೀನುಗಳಿಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸಾಕ್ಷಿಯು ಅಲ್ಲಿಯೂ ಹೋಗುತ್ತಾರೆ ಮತ್ತು ಎರಡೂ ಕಡೆಯೂ ಹೋಗುತ್ತಾರೆ ಎಂದು ನುಡಿಯುತ್ತಾರೆ. ಲಕ್ಷ್ಮೀಬಾಯಿ ನಂದ್ಯಾಳ ಮತ್ತು ಸಿದ್ದಯ್ಯ ಹಿರೇಮಠ ಇವರ ಜಮೀನು ಚೋರಗಿ-ಬಬಲಾದ ರಸ್ತೆಯ ಹತ್ತಿರ ಇರುತ್ತವೆ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯ ಜಮೀನಿನ ದಕ್ಷಿಣ ದಿಕ್ಕಿಗೆ ಇರುವ ಹಾದಿಯನ್ನು ಚೋರಗಿ-ಬಬಲಾದ ಇರುವ ರಸ್ತೆಗೆ ಕ್ರಾಸ್ ಎಂದು ಕರೆಯುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದಿಯು ಸದರಿ ರಸ್ತೆಯ ಕ್ರಾಸನ್ನು ಈಗ್ಗೆ 6-7 ತಿಂಗಳ ಹಿಂದೆ ಬಂದ್ ಮಾಡಿರುತ್ತಾರೆ. ಈ ದಾವೆಗಿಂತ ಮೊದಲು ಪ್ರತಿವಾದಿಯು ಅಸಲು ದಾವಾ ನಂ.256/2016 ರಂತೆ ಅಧಿಕ ದಿವಾಣಿ ನ್ಯಾಯಲಾಯ ಇಂಡಿಯಲ್ಲಿ ದಾವೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಹಾಜರಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ ನಂತರ ನಾವು ಈ ಪ್ರಸ್ತೂತ ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿ. ಪ್ರತಿವಾದಿಯು ತಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ಇರುವ ದಾರಿಯಲ್ಲಿ ಬಂದು ಉಪಭೋಗ ಮಾಡುತ್ತಾರೆ ಮತ್ತು ನಾವು ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಇರುವ ದಾರಿಯಲ್ಲಿ ಬಂದು ಉಪಭೋಗ ಮಾಡುತ್ತೇವೆ ಎಂದರೆ ಸಾಕ್ಷಿಯು ಪ್ರತಿವಾದಿಯು ದಾರಿಯನ್ನು ಬಂದ್ ಮಾಡಿರುತ್ತಾನೆ ಎಂದು ನುಡಿಯುತ್ತಾರೆ.



ನಾವು ಪ್ರತಿವಾದಿಗೆ ದಾವೆ ದಾಖಲಿಸುವ ಮೊದಲು ದಾರಿಯನ್ನು ಕೇಳಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಲ್ಲಿ ದಾರಿ ಇದ್ದು ಅಲ್ಲಿಂದಲೇ ನಾವು ಹಾಯುತ್ತಿದ್ದು ಅದನ್ನು ಬಂದ್ ಮಾಡಿದ ಕಾರಣ ನಾವು ನ್ಯಾಯಾಲಯದಲ್ಲಿ ದಾವೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ದಾವಾ ದಾರಿಯನ್ನು ದಾವಾ ದಾಖಲಿಸುವ ಮೊದಲು ಬಂದ್ ಮಾಡಿರುವುದಿಲ್ಲ ಆದರೆ ದಾವಾ ದಾಖಲಿಸಿದ

ನಂತರ ಬಂದ್ ಮಾಡಿರುತ್ತಾನೆ. ದಿಃ20.07.2016 ರಂದು ದಾರಿಯ ಬಗ್ಗೆ ಪ್ರತಿವಾದಿಗೆ ಕೇಳಿರುತ್ತೇವೆ ಎಂದು ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿ ಬರೆಸಿಲ್ಲ. ಈ ದಾವೆಗೆ ನಾವೇ ಮಾಹಿತಿ ನೀಡಿರುತ್ತೇವೆ. ದಿಃ20.07.2016 ರಂದು ಪ್ರತಿವಾದಿಯು ದಾರಿಗೆ ತಕರಾರು ಮಾಡಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯು ಕಲ್ಲು, ಮುಳ್ಳು ಹಾಕುತ್ತಿದ್ದರಿಂದ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷ್ಯಾಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ದಾರಿಯು 3 ನೇ ದಾರಿ ಇರುತ್ತದೆ ಎಂದರೆ ಸರಿಯಲ್ಲ. 3 ದಾರಿ ಇದ್ದರು ದಾವಾ ದಾರಿಯನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷ್ಯಾ ಪ್ರಮಾಣ ಪತ್ರಕ್ಕೂ ಮತ್ತು ನಮ್ಮ ಸರ್ವೆ ನಂಬರಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯಾಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ಅಂಶಗಳು ಸುಳ್ಳು ಇದ್ದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಮಗೆ ಬೀಗರಾಗಬೇಕು. ಪ್ರತಿವಾದಿಗೂ ಮತ್ತು ನಮಗೂ ಮನಸಾ ಮನಸಾ ಸರಿಯಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ಪ್ರತಿವಾದಿಗೂ ಜಗಳವಾಗಿತ್ತು ಎಂದರೆ ಸರಿ. ಆ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಗುನ್ನಾ ನಂ.172/2016 ರಂತೆ ದಾಖಲಾಗಿದ್ದು ಅದನ್ನು ಪ್ರತಿವಾದಿಯು ದಾಖಲು ಮಾಡಿದ್ದನು ಎಂದರೆ ಸರಿ. ನಾವು ತೊಂದರೆ ಮಾಡಿದ್ದರಿಂದ ಪ್ರತಿವಾದಿಯು ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಪ್ರಕರಣವು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.